ನಂ:ಕಂಬಾಸು (2) 299:97-98

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಹಾಸನ ಜಿಲ್ಲೆ,
ಹಾಸನ, ದಿನಾಂಕ: 23-10-98.

(1)

## ಸುತ್ತೋಲೆ

ವಿಷಯ:- ಸಾರ್ವಜನಿಕರಿಂದ ಭೂ ಮಂಜೂರಾತಿ ಕೋರಿ ಬರುವ ಮನವಿಗಳ ಬಗ್ಗೆ ಪ್ರಸ್ತಾವನೆ ಸಲ್ಲಿಸುವ ಕುರಿತು

ಉಲ್ಲೇಖ:- ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ:64:ಎಲ್‌ಜಿಎಲ್ 95, ದಿನಾಂಕ 25-3-97

2) ಮೈಸೂರು ವಿಭಾಗಾಧಿಕಾರಿಗಳ ಪತ್ರದ ಸಂಖ್ಯೆ:ಎಲ್‌ಎನ್‌ಡಿ (1) ಹಾ:1:97-98, ದಿನಾಂಕ: 17-6-1997

3) ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ: 250 ಎಲ್‌ಜಿಡಿ :97 ದಿನಾಂಕ: 5-11-97.

4) ಸರ್ಕಾರದ ಸುತ್ತೋಲೆ ಕಂಇ: 64:ಎಲ್‌ಜಿಎಲ್:95 (ಪಿ) ದಿನಾಂಕ 15-12-97.

5) ಸರ್ಕಾರದ ಪತ್ರದ ನಂ: ಕಂಇ:4:ಎಲ್‌ಜಿಪಿಜೆ 97, ದಿನಾಂಕ:18-8-98

6) ಸರ್ಕಾರದ ಸಂಖ್ಯೆ:ಕಂಇ:28:ಎಲ್‌ಜಿಪಿಜೆ:96 ದಿನಾಂಕ: 1-9-98.

7) ಸರ್ಕಾರದ ಸಂಖ್ಯೆ: ಕಂಇ:60 ಎಲ್‌ಜಿಪಿಜೆ 97, ದಿ: 16-9-98

-00-

ಮೇಲೆ ತಿಳಿಸಿರುವ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳು, ಪತ್ರಗಳಲ್ಲಿ ಭೂ ಮಂಜೂರಾತಿ ಕುರಿತು ನಿರ್ಬಂಧಗಳನ್ನು:ನಿರ್ದೇಶನಗಳನ್ನು ನೀಡುತ್ತಿದ್ದು ಕರ್ನಾಟಕ ಭೂ ಕಂದಾಯ ಅಧಿನಿಯಮ 1964, ಭೂ ಕಂದಾಯ ನಿಯಮಗಳು 1966 ಮತ್ತು ಭೂ ಮಂಜೂರಾತಿ ನಿಯಮಗಳು 1969 ರ ಅಡಿಯಲ್ಲಿ ಕಾಲಕಾಲಕ್ಕೆ ಆಗಿರುವ ತಿದ್ದುಪಡಿಗಳ ಅನ್ವಯ ಕಂದಾಯ ಇಲಾಖೆ, ತಾಲ್ಲೂಕು ಉಪ ವಿಭಾಗ, ಜಿಲ್ಲೆ ಮತ್ತು ವಿಭಾಗದ ಅಧಿಕಾರಿಗಳಿಗೆ ವಿಹಿತವಾಗಿರುವ ಅಧಿಕಾರವನ್ನು ಸರ್ಕಾರ ಮಟ್ಟದಲ್ಲಿಯೇ ಕ್ರೋಢೀಕರಿಸಿ, ಇಂತಹ ಪ್ರಕರಣಗಳನ್ನು ವಿಲೇ ಮಾಡುವ ಅಧಿಕಾರವನ್ನು ಅವರಿಗೆ ಪುನರುತ್ಥಾನಗೊಳಿಸಲು ಸರ್ಕಾರವು ಉಲ್ಲೇಖ (1) ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತದೆ.

ಸದರಿ ಸುತ್ತೋಲೆಯ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಮೈಸೂರು ವಿಭಾಗಾಧಿಕಾರಿಗಳು ವಿವರಿಸಿ ಭೂ ಮಂಜೂರಾತಿ ನಿಯಮ 1969 ರ ನಿಯಮ 3 ರಲ್ಲಿ ವಿವರಿಸುವಂತೆ ಪ್ರತಿಯೊಂದು ಗ್ರಾಮದಲ್ಲಿ ಲಭ್ಯವಿರುವ ಸರ್ಕಾರಿ ಜಮೀನನ್ನು ವಿವಿಧ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಿರುವ ಜಮೀನನ್ನು ಮೀಸಲಿರಿಸಿದ ನಂತರವೂ ಸರ್ಕಾರಿ ಜಮೀನು ಉಳಿದಲ್ಲಿ ಅಂತಹ ಜಮೀನನ್ನು ಲಭ್ಯತೆ ಪಟ್ಟಿಗೆ ತಂದು ಪ್ರಕಟಿಸಿದ ನಂತರ, ಭೂ ಮಂಜೂರಾತಿ ಬಗ್ಗೆ ನಿಯಮಾನುಸಾರ ಕ್ರಮ ವಹಿಸಬಹುದೆಂದೂ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯವಿರುವಷ್ಟು ಜಮೀನು ಲಭ್ಯವಿಲ್ಲದ ಗ್ರಾಮಗಳಲ್ಲಿ ಭೂ ಮಂಜೂರಾತಿ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉಲ್ಲೇಖ (2)ರ ಪತ್ರದಲ್ಲಿ ಸ್ಪಷ್ಟೀಕರಣ ನೀಡಿರುತ್ತಾರೆ.

ಮುಂದುವರೆದಂತೆ ಸರ್ಕಾರವು ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆ ಇನ್ನಿತರ ಸ್ಥಳಗಳಲ್ಲಿ ಸಂಸ್ಥೆಗಳಿಗೆ, ಮಂಡಳಿಗಳಿಗೆ ಭೂ ಮಂಜೂರಾತಿ ಮಾಡುವಾಗ ಅನುಸರಿಸಬೇಕಾದ

ಕ್ರಮ ಹಾಗೂ ಮಂಜೂರಿ ಮಾಡಲು ಇರುವ ಗರಿಷ್ಠ ವಿಸ್ತೀರ್ಣದ ಬಗ್ಗೆ ಉಲ್ಲೇಖ (3)ರ ಸುತ್ತೋಲೆಯಲ್ಲಿ ವಿವರಿಸುತ್ತಾ ದಿನಾಂಕ: 15-12-97 ರ ಸುತ್ತೋಲೆಯಲ್ಲಿ ನಿಯಮಗಳ ಪ್ರಕಾರ ಗೋಮಾಳ, ಜಮೀನನ್ನು ಸಹ ಸೇರಿಸಿ ಆಯಾಯ ಸಂಬಂಧ ಕಂದಾಯ ಅಧಿಕಾರಿಗಳು ತಮ್ಮ ವಿವೇಚನಾತ್ಮಕ ಮತ್ತು ವಿತ್ತಾಧಿಕಾರದ ಮಿತಿಯೊಳಗೆ ಮಂಜೂರಿ ಮಾಡಬಹುದಾಗಿದೆ ಎಂದು ತಿಳಿಸಲಾಗಿದೆ.

ಆದರೆ ಸರ್ಕಾರದ ಪತ್ರದ ಸಂಖ್ಯೆ ಕಂಇ:4 ಎಲ್‌ಡಿಬಿಪಿ 97, ದಿನಾಂಕ: 18-8-98 ರ ಪತ್ರದಲ್ಲಿ ಬೇಲೂರು ತಾಲ್ಲೂಕಿನ ಬೀಚನಹಳ್ಳಿ ಗ್ರಾಮದ ಸರ್ವೆ ನಂ: 51 ರಲ್ಲಿ 0-32 ಗುಂಟೆ ಪ್ರದೇಶವನ್ನು ಬೇಲೂರು ವೀರಶೈವಸಂಸ್ಥೆ ( ರಿ ) ಇವರಿಗೆ ಕಲ್ಯಾಣಮಂಟಪ ಹಾಗೂ ಬಸವೇಶ್ವರ ದೇವಸ್ಥಾನಕ್ಕೆ ಮಂಜೂರಾತಿ ನೀಡುವ ಬಗ್ಗೆ ಪ್ರಸ್ತುತ ಜಮೀನು ಗುಂಡು ತೋಪು ಆಗಿರುವುದರಿಂದ, ಮಂಜೂರಾತಿ ನಿಯಮಗಳಲ್ಲಿ . ಮಂಜೂರಿಗೆ ಅವಕಾಶವಿಲ್ಲವೆಂದು ಪ್ರಸ್ತಾವನೆಯನ್ನು ತಿರಸ್ಕರಿಸಿ, ಇನ್ನು ಮುಂದೆ ಇಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕಳಿಸಬಾರದೆಂದು ನಿರ್ದೇಶನ ನೀಡಲಾಗಿರುತ್ತದೆ.

ಸರ್ಕಾರದ ಪತ್ರದ ಸಂಖ್ಯೆ: ಕಂಇ:28 ಎಲ್‌ಡಿಬಿಪಿ 96, ದಿನಾಂಕ: 1-9-98 ರ ಪತ್ರದಲ್ಲಿ ದುದ್ದ ಗ್ರಾಮದ ಸರ್ವೆನಂ: 27 ರ ಪ್ರಸ್ತಾಪಿತ ಜಮೀನು ಕೆರೆ ಅಂಗಳ, ಜಮೀನಾಗಿರುವುದರಿಂದ ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ ಪ್ರಸ್ತಾವನೆಯನ್ನು ತಿರಸ್ಕರಿಸಿ, ಅರ್ಜಿದಾರರಿಗೆ ಹಿಂಬರಹ ನೀಡಲು ನಿರ್ದೇಶಿಸಿರುತ್ತಾರೆ.

ಸರ್ಕಾರದ ಪತ್ರದ ಸಂಖ್ಯೆ: ಕಂಇ 60 ಎಲ್‌ಡಿಬಿಪಿ 97, ದಿನಾಂಕ: 16-5-98 ರ ಪತ್ರದಲ್ಲಿ ಸಿರಗೂರ ಸರ್ವೆನಂ: 89 ರ ಪ್ರಸ್ತಾಪಿತ ಜಮೀನು ಗೋಮಾಳವಾಗಿರುವುದರಿಂದ ಪ್ರಸ್ತಾವನೆಯನ್ನು ತಿರಸ್ಕರಿಸಿ, ಅರ್ಜಿದಾರರು ಭೂ ಮಂಜೂರಾತಿಗೆ ಅರ್ಹರಿದ್ದಲ್ಲಿ — ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಅಡಿಯಲ್ಲಿ ಪರಿಶೀಲಿಸಿ, ಲಭ್ಯತಾ ಪಟ್ಟಿಗೆ ಸೇರಿದ ಬೇರೆ ಜಮೀನು ಲಭ್ಯವಿದ್ದಲ್ಲಿ ಪರಿಶೀಲಿಸುವಂತೆ ನಿರ್ದೇಶನ ನೀಡಿರುತ್ತಾರೆ.

ಈ ಮೇಲ್ಕಂಡ ಅಂಶಗಳನ್ನು ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳು: ತಹಸೀಲ್ದಾರರು ಗಳು ಗಮನಿಸಿದ್ದರೂ ಸಹ ಅನಗತ್ಯವಾಗಿ , ಸರ್ಕಾರಿ ಕೆರೆ, ಕೆರೆಅಂಗಳ, ಗುಂಡುತೋಪು ಕಟ್ಟೆ, ಖರಾಬು ಜಮೀನು, ಈಚಲುವನ, ಗುಂಡುತೋಪು, ಮುಂತಾದ ವರ್ಗದ ಜಮೀನುಗಳ ಮಂಜೂರಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿ, ಸಾರ್ವಜನಿಕರು ಅನಗತ್ಯವಾಗಿ, ಈ ಕಛೇರಿಗೆ ರಾಜಕೀಯ ಒತ್ತಡಗಳನ್ನು ತರುವಂತೆ ಪ್ರಚೋದಿಸುತ್ತಿರುವುದು ಕಂಡು ಬಂದಿರುತ್ತೆ. ಈ ಕಾರಣ ಇನ್ನು ಮುಂದೆ ಇಂತಹ ಪ್ರಸ್ತಾವನೆಗಳನ್ನು ಸಲ್ಲಿಸಬಾರದಾಗಿ ಶಿಸ್ತಿನ ನಿರ್ದೇಶನ ನೀಡಲಾಗಿದೆ.

(ಕರಡು ಜಿಲ್ಲಾಧಿಕಾರಿಗಳಿಂದ
ಅನುಮೋದಿಸಲ್ಪಟ್ಟಿದೆ )

(ಸಹಿ)
ಜಿಲ್ಲಾಧಿಕಾರಿಗಳು,
ಹಾಸನ ಜಿಲ್ಲೆ-ಹಾಸನ.

ಪ್ರತಿಯನ್ನು:-

1) ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅವಗಾಹನೆಗೆ ಮಂಡಿಸಿದೆ.
2) ವಿಭಾಗಾಧಿಕಾರಿಗಳು, ಮೈಸೂರು ವಿಭಾಗ, ಮೈಸೂರು ರವರ ಅವಗಾಹನೆಗೆ ಒಪ್ಪಿಸಿದೆ.
3) ಉಪ ವಿಭಾಗಾಧಿಕಾರಿಗಳು, ಹಾಸನ: ಸಕಲೇಶಪುರ ರವರಿಗೆ ಸೂಕ್ತ ತಿಳುವಳಿಕೆಗಾಗಿ ಕಳಿಸಿದೆ.
4) ಜಿಲ್ಲೆಯ ಎಲ್ಲಾ ತಹಸೀಲ್ದಾರರುಗಳಿಗೆ ತಿಳುವಳಿಕೆಗಾಗಿ,
5) ದರಖಾಸ್ತು (1) ಮತ್ತು (2)ರ ಸುತ್ತೋಲೆ ಕಡತಕ್ಕೆ.

ಜಿಲ್ಲಾಧಿಕಾರಿಗಳವರ ಪರವಾಗಿ,
ಹಾಸನ ಜಿಲ್ಲೆ- ಹಾಸನ.